# <u>ಸಾಮಾನ್ಯವಲ್ಲ ಶ್ರೀ ಹರಿಯ ಸೇವೆ</u>

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 141.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi. The wordings are matching with Ref. 1 except few minor differences, which are not considered here, page No. 557.
3. **Note:** This song is not available in the books of Prof. S.K. Ramachandra Rao.
4. **Note:** The Ankita is same in both the books. But the Ankita used by the singer is different. However, we have considered book in Ref.1 as standard and taken that Ankita for listing.
5. **Note:** The wordings here are as per Ref. 1. The wordings of the singer are matching. But the singer has omitted few wordings and few stanzas while singing.

ರಾಗ: ಆನಂದ ಭೈರವಿ ತಾಳ: ಆದಿ

ಸಾಮಾನ್ಯವಲ್ಲ ಶ್ರೀ ಹರಿಯ ಸೇವೆ
ಪಾಮರ ಜನರಿಗೆ ಸಾಮಾನ್ಯವಲ್ಲ ॥ ಪ ॥

ಸಾಮಜ ವರದನ ಪ್ರೇಮದಿ ನೆನೆವುದು
ತಾಮಸ ಬುದ್ಧಿಯ ತಾ ತಗ್ಗಿಸದೆ ॥ ಅಪ ॥

ಅಂತರ ಮಲಿನವಳಿಯಲುಬೇಕು ಸಂತತ ಶ್ರವಣದಿ ಶ್ರೀ-
ಕಾಂತನ ಚರಿತವ ಕೇಳಲು ಬೇಕು ಸಂತಸದಿರಬೇಕು
ಸಂತ ಜನರ ಗುಣ ಸಂತತ ಮನದಿ ನಿ-
ರಂತರದಲಿ ತಾ ಚಿಂತಿಸಬೇಕು ॥ ೧ ॥

ಜ್ಞಾನ ಕರ್ಮೇಂದ್ರಿಯಗಳ ನಿಗ್ರಹಿಸಿ ಜ್ಞಾನವ ಸಂಗ್ರಹಿಸಿ
ಹಾನಿ ವೃದ್ಧಿಗಳೆರಡನು ತಾ ಸಹಿಸಿ ದೀನತೆಯನು ವಹಿಸಿ
ಮಾನಾಪಮಾನ ಸಮಾನವೆಂದರಿದು ನಿ-

ಧಾನದಿ ಹರಿ ಗುಣ ಧ್ಯಾನವ ಮಾಳ್ಪುದು  ॥ ೨ ॥

ಸರ್ವಾಂತರ್ಯಾಮಿ ಶ್ರೀ ಹರಿಯೆಂದು ಸರ್ವೇಶ್ವರನೆಂದು
ಸರ್ವರ ಧಣಿ ಸ್ವರಮಣನೆಂದು ಸರ್ವಾನುಗನೆಂದು
ಸರ್ವ ಮೂರುತಿ ಶ್ರೀ ಪುರಂದರ ವಿಠಲನ
ಸರ್ವದಾ ಧ್ಯಾನಿಸಿ ಗರ್ವವಳಿಯ ಬೇಕು  ॥ ೩ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ತಾಮಸ ಬುದ್ಧಿ** = ಅಜ್ಞಾನವು ಮುಸುಕಿದ ಬುದ್ಧಿ

**ಶ್ರವಣ** = ಕಿವಿ, ಕೇಳುವಿಕೆ, ಆಲಿಸುವಿಕೆ

**ಸ್ವರಮಣ** = ತನ್ನಲ್ಲಿಯೇ ದಿವ್ಯಾನಂದವನ್ನು ಅನುಭವಿಸುವವ

**ಸರ್ವಾನುಗ** = ಎಲ್ಲರಿಗೂ ಬೆಂಬಲವಾಗಿರುವವ

**Classification:** Keerthane
**Ankita:** Sri Purandara Vittala
**Location:** NA
**Category:** Pooja Tatva, Krishna Stuti, Mukti Marga
**Sub-Category:** Krishna, buddi, chinte, Dhyana, garva,
**Pravachana:** NA
**Explanation:** NA